# ರಫಿಗೆ ಅವಮಾನ



ಕರಣ್ ಜೋಹರ್ ನಿರ್ದೇಶನದ 'ಏ ದಿಲ್ ಹೈ ಮುಷ್ಕಿಲ್' ಪಾಕಿಸ್ತಾನದ ನಟ ಫವಾದ್ ಖಾನ್ ನಟಿಸಿದ್ದಾನೆ ಎಂಬ ಕಾರಣಕ್ಕೆ ವಿವಾದ ಸೃಷ್ಟಿಸಿ ಕೊನೆಗೆ ಬಿಡುಗಡೆಯೂ ಆಯಿತು. ಚಿತ್ರತಂಡದ ಪ್ರಕಾರ ಸಿನಿಮಾ ಭರ್ಜರಿ ಗಳಿಕೆ ಕಂಡಿದೆ. ಚರ್ವಿತ ಚರ್ವಣ ವಸ್ತುಗಳನ್ನೇ ಸುತ್ತಿಕೊಡುವ ಕರಣ್ ಶೈಲಿ ಇಲ್ಲಿಯೂ ಮುಂದುವರಿದಿದೆ ಎಂಬ ಟೀಕೆಗಳು ವ್ಯಕ್ತವಾಗಿವೆ. ಕರಣ್ ಸಿನಿಮಾಗಳಲ್ಲಿನ ಹಿನ್ನೆಲೆ, ವಸ್ತು, ಬದುಕು, ಪ್ರೀತಿ ಎಲ್ಲವೂ ವಾಸ್ತವಿಕ ಬದುಕಿನಿಂದ ದೂರವೇ ಇರುವಂಥದ್ದು. 'ಏ ದಿಲ್...' ಕೂಡ ಅದರಿಂದ ಹೊರತಾಗಿಲ್ಲ. ಆದರೆ ಸಿನಿಮಾ ಬಿಡುಗಡೆಯಾದ ಬಳಿಕವೂ ವಿವಾದ ಸೃಷ್ಟಿಸಿದೆ. ಇದಕ್ಕೆ ಕಾರಣ ಚಿತ್ರರಂಗದ ಮಹಾನ್ ಗಾಯಕ ಮಹಮದ್ ರಫಿ ಅವರಿಗೆ ಅಗೌರವ ತೋರಿಸಿರುವುದು. ಈ ಚಿತ್ರದಲ್ಲಿ ರಣಬೀರ್ ಕಪೂರ್ ಗಾಯಕನಾಗಬೇಕೆಂಬ ಕನಸು ಹೊಂದಿದವನು. ಮಹಮದ್ ರಫಿ ರೀತಿ ಗಾಯಕನಾಗಬೇಕು ಎನ್ನುವ ಆತನಿಗೆ ನಾಯಕಿ ಅನುಷ್ಕಾ ಶರ್ಮಾ ಹೇಳುವ ಮಾತು 'ಮಹಮದ್ ರಫಿ ಹಾಡುವುದಿಲ್ಲ, ಅಳುತ್ತಾರೆ ಅಷ್ಟೇ'. ಈ ರೀತಿ ತಂದೆಗೆ ಅವಮಾನ ಮಾಡುವ ಸಂಭಾಷಣೆ ಇರುವುದನ್ನು ರಫಿ ಅವರ ಮಗ ಶಾಹಿದ್ ರಫಿ ಖಂಡಿಸಿದ್ದಾರೆ. ಕರಣ್ ಜೋಹರ್ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದ್ದಾರೆ. ಆದರೆ ಕರಣ್ ಮಾತ್ರ ಇದಕ್ಕೆ ಸೊಪ್ಪು ಹಾಕಿಲ್ಲ. ಈ ರೀತಿಯ ಅವಮಾನವನ್ನು ಕರಣ್‌ರಿಂದ ನಿರೀಕ್ಷಿಸಿರಲಿಲ್ಲ. ಅವರು ಒಳ್ಳೆಯ ನಿರ್ದೇಶಕರಾಗಿರಬೇಕಿತ್ತು ಎಂದು ಶಾಹಿದ್ ಆಕ್ರೋಶ ಹೊರಹಾಕಿದ್ದಾರೆ. ಸಿನಿಮಾದಿಂದ ಆ ಸಂಭಾಷಣೆಯನ್ನು ತೆಗೆದುಹಾಕಬೇಕು ಎಂದೂ ಅವರು ಒತ್ತಾಯಿಸಿದ್ದಾರೆ. ರಫಿ ಅವರ ವರ್ಚಸ್ಸಿಗೆ ಈಗಾಗಲೇ ಹಾನಿ ಮಾಡಿಯಾಗಿದೆ. ಸಿನಿಮಾ ಬಿಡುಗಡೆವರೆಗೂ ನಯವಾಗಿ ವರ್ತಿಸಿದ ಕರಣ್, ಈಗ ಜಾಣ ಕಿವುಡು ಪ್ರದರ್ಶಿಸುತ್ತಿದ್ದಾರೆ.



# ಲಿಸಾ 'ಮೂಲ' ಸಂಕಟ

ಕೇರಳದ ತಂದೆ, ಆಸ್ಟ್ರೇಲಿಯಾದ ತಾಯಿಗೆ ಚೆನ್ನೈನಲ್ಲಿ ಜನಿಸಿದ ನಟಿ, ರೂಪದರ್ಶಿ ಲಿಸಾ ಹೇಡನ್ ಬಾಲಿವುಡ್‌ನಲ್ಲಿ ಆಗಾಗ್ಗೆ ಕಾಣಿಸಿಕೊಳ್ಳುತ್ತಿರುತ್ತಾಳೆ. ನಾಯಕಿಯಾಗಿ ನೆಲೆ ಕಂಡುಕೊಳ್ಳುವ ಪ್ರಯತ್ನ ಇನ್ನೂ ಸಾಧ್ಯವಾಗಿಲ್ಲ. ಸಣ್ಣಪುಟ್ಟ ಪಾತ್ರಗಳಿಗೇ ಆಕೆ ತೃಪ್ತಿ ಪಟ್ಟುಕೊಳ್ಳುವಂತಾಗಿದೆ. ಹೀಗಿರುವ ಲಿಸಾ ಮೊನ್ನೆ ಮೊನ್ನೆ ಸದ್ದಿಲ್ಲದೆ ಮದುವೆಯಾಗಿದ್ದಾಳೆ. ಇಂಗ್ಲೆಂಡ್ ಮೂಲದ ಉದ್ಯಮಿ ಡಿನೊ ಲಾಲ್ವಾನಿ ಜತೆ ಸಾಂಸಾರಿಕ ಬದುಕಿಗೆ ಕಾಲಿಟ್ಟಿರುವ ಲಿಸಾಳಿಗೆ ಮದುವೆ ಕುರಿತಾದ ಪ್ರಶ್ನೆಗಳಿಗಿಂತಲೂ ತನ್ನ ಮಾವನ ಮೂಲದ ಕುರಿತ ಪ್ರಶ್ನೆಗಳಿಗೆ ಉತ್ತರಿಸಲು ಸಾಕು ಸಾಕಾಗುತ್ತಿದೆಯಂತೆ.

ಲಿಸಾಳ ಮಾವ ಗುಲು ಲಾಲ್ವಾನಿ ಪಾಕಿಸ್ತಾನದ ಪ್ರಜೆ ಎಂದು ಮಾಧ್ಯಮಗಳು ವರದಿ ಮಾಡಿದ್ದವು. ಗುಲು ಅವರು ಹುಟ್ಟಿದ್ದು ಕರಾಚಿಯಲ್ಲಿಯೇ. ಆದರೆ ದೇಶ ವಿಭಜನೆ ಸಮಯದಲ್ಲಿ ದೇಶ ತೊರೆದು ಭಾರತಕ್ಕೆ ಬಂದು ಇಲ್ಲಿನ ಪ್ರಜೆಯಾದರು. ಈಗ ಅವರು ಬ್ರಿಟನ್‌ನ ನಿವಾಸಿ. ಹೀಗಿದ್ದೂ ತನ್ನ ಮಾವ ಪಾಕಿಸ್ತಾನಿ ಎಂಬ ವರದಿಗಳು ಬರುತ್ತಿರುವುದನ್ನು ಕಂಡು ಲಿಸಾ ರೋಸಿ_ಹೋಗಿದ್ದಾಳೆ. ಅದಕ್ಕಾಗಿ ಟ್ವಿಟರ್‌ನಲ್ಲಿ ಪ್ರತಿಕ್ರಿಯೆಯನ್ನೂ ನೀಡಿದ್ದಾಳೆ. 'ನನ್ನ ಪತಿ ಭಾರತೀಯ. ನನ್ನ ಮಾವ ಗುಲು ಲಾಲ್ವಾನಿ ವಿಭಜನಾ ಪೂರ್ವ ಭಾರತದಲ್ಲಿ ಜನಿಸಿದವರು. ಆ ಭಾಗವನ್ನೀಗ ಪಾಕಿಸ್ತಾನ ಎಂದು ಕರೆಯಲಾಗುತ್ತಿದೆ. ದೇಶ ವಿಭಜನೆಯ ಸಂಕಷ್ಟಗಳನ್ನು ಎದುರಿಸಿಕೊಂಡೇ ಅವರು ಬೆಳೆದವರು' ಎಂದು ಆಕೆ ಟ್ವೀಟ್ ಮಾಡಿದ್ದಾಳೆ.

ಗುಲು ಅವರು ತಮ್ಮ ಸಹೋದರನೊಂದಿಗೆ ಸೇರಿಕೊಂಡು 1958ರಲ್ಲಿ ಬಿನಾಟೋನ್ ಎಂಬ ಬ್ರಿಟಿಷ್ ಟೆಲಿಕಮ್ಯುನಿಕೇಷನ್ಸ್ ಕಂಪೆನಿಯನ್ನು ಪ್ರಾರಂಭಿಸಿದ್ದರು. ಅದನ್ನೀಗ ಅವರ ಮಗ ಡಿನೊ ನೋಡಿಕೊಳ್ಳುತ್ತಿದ್ದಾನೆ.

ಏನೇ ಇರಲಿ, ವಿವಿಧತೆಯಲ್ಲಿ ಏಕತೆ ಎಂಬ ದೇಶದ ಗುರುತಿಗೆ ಲಿಸಾ ಉತ್ತಮ ಉದಾಹರಣೆಯಂತೂ ಹೌದು.

■ ಅಮಿ